# Launch of BRICS 2021 Website

February 19, 2021

---

# ಬ್ರಿಕ್ಸ್ 2021 ವೆಬ್‌ಸೈಟ್‌ನ ಪ್ರಾರಂಭ

ಫೆಬ್ರವರಿ 19, 2021

ಸುಷ್ಮಾ ಸ್ವರಾಜ್ ಭವನದಲ್ಲಿರುವ ಬ್ರಿಕ್ಸ್ ಸಚಿವಾಲಯದಲ್ಲಿ ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ರವರು ಭಾರತದ ಬ್ರಿಕ್ಸ್ 2021 ವೆಬ್‌ಸೈಟ್ www.brics2021.gov.in ಅನ್ನು ಪ್ರಾರಂಭಿಸಿದರು.

ಬ್ರಿಕ್ಸ್ ತನ್ನ 15ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಸಮಯದಲ್ಲಿ, ಭಾರತವು 2021 ರಲ್ಲಿ ಬ್ರಿಕ್ಸ್ ಅಧ್ಯಕ್ಷತೆಯನ್ನು ವಹಿಸಿಕೊಂಡಿದೆ. ಬ್ರಿಕ್ಸ್@15: ಇಂಟ್ರಾ-ಬ್ರಿಕ್ಸ್ ಸಹಕಾರ ಎಂಬ ವಿಷಯದ ಅಡಿಯಲ್ಲಿ, ಭಾರತದ ವಿಧಾನವು ನಿರಂತರತೆ, ಬಲವರ್ಧನೆ ಮತ್ತು ಒಮ್ಮತದ ಮೂಲಕ ಸಹಯೋಗವನ್ನು ಬಲಪಡಿಸುವತ್ತ ಗಮನಹರಿಸಿದೆ. ವರ್ಷದಲ್ಲಿ ಬ್ರಿ ಬ್ರಿಕ್ಸ್ ನ ಆದ್ಯತೆಗಳಲ್ಲಿ ಬಹುಪಕ್ಷೀಯ ವ್ಯವಸ್ಥೆಯ ಸುಧಾರಣೆ, ಭಯೋತ್ಪಾದನಾ ನಿಗ್ರಹ ಸಹಕಾರ, ಸುಸ್ಥಿರ ಅಭಿವೃದ್ಧಿ ಗುರಿಗಳಿಗಾಗಿ ತಾಂತ್ರಿಕ ಮತ್ತು ಡಿಜಿಟಲ್ ಪರಿಹಾರಗಳು ಮತ್ತು ಪಿ2ಪಿ ಸಹಕಾರವನ್ನು ಹೆಚ್ಚಿಸುವುದು ಸೇರಿವೆ.

ಮೀಸಲಾದ ವೆಬ್‌ಸೈಟ್ ನವೀಕರಿಸಿದ ಮತ್ತು ಕ್ರಿಯಾತ್ಮಕ ಮಾಹಿತಿ ಭಂಡಾರವನ್ನು ನಿರ್ವಹಿಸುತ್ತದೆ ಮತ್ತು ಬ್ರಿಕ್ಸ್‌ನ ಎಲ್ಲಾ ಸಂಬಂಧಿತ ಮಾಹಿತಿಯನ್ನು ದಾಖಲೆಗಳು, ಪತ್ರಿಕಾ ಪ್ರಕಟಣೆಗಳು ಹಾಗೂ ಮಾಧ್ಯಮ ಗ್ಯಾಲರಿ ಮತ್ತು ವರ್ಷದಲ್ಲಿ ಯೋಜಿಸಲಾದ ಘಟನೆಗಳಿಗೆ ನೋಂದಣಿ ವೇದಿಕೆಯೊಂದಿಗೆ ಪ್ರದರ್ಶಿಸುತ್ತದೆ.

**ನವ ದೆಹಲಿ**

**ಫೆಬ್ರವರಿ 19, 2021**

DISCLAIMER: This is an approximate translation. The original is available in English on MEA's website and may be referred to as the official press release.